**<u>ದಿನಾಂಕಃ 12-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 6 ರಿಂದ 10 ನೇ ಪ್ರತಿವಾದಿ ಪರ ಶ್ರೀ ಎನ್ ಬಿ ಬಿ ವಕೀಲರಿಂದಃ</u>**

8. ನಾನು ರಾಮಗೊಂಡೆನಹಳ್ಳಿಯಲ್ಲಿ ಮಜಡಾ ವಾಹನವನ್ನು ಚಾಲನೆ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2017 ರಲ್ಲಿ ಖರೀದಿಸಿರುತ್ತೇನೆ ಎನ್ನುತ್ತಾರೆ. ನಾನು ಸದರಿ ವಾಹನದಲ್ಲಿ ಸರಕುಗಳನ್ನು ಸಾಗಿಸಲು 08 ದಿನಗಳವರೆಗೆ ಹೋರಗಡೆ ಇರುತ್ತೇನೆ ಎಂದರೆ ಸಾಕ್ಷಿ 01-02 ದಿನ ಮಾತ್ರ ಹೋರಗಡೆ ಇರುತ್ತೇನೆ ಎನ್ನುತ್ತಾರೆ. ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಸಮನ್ಸ ಬಂದಿತ್ತು ಎಂದರೆ ಸರಿಅಲ್ಲ. ನನಗೆ ವಾದಿ ಸಾಕ್ಷಿ ನುಡಿಯಲು ಕರೆಯಿಸಿರುತ್ತಾನೆ ಎಂದರೆ ಸರಿ. ವಾದಿ ಕದರಮಂಡಲಗಿ ಗ್ರಾಮದಲ್ಲಿ ಹೊಸದಾಗಿ ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ. ಸದರಿ ಮನೆ ನಿರ್ಮಾಣಕ್ಕೆ ಬೇಕಾಗುವ ಮರಳನ್ನು ಹಾಗೂ ಇಟ್ಟಿಗೆಗಳನ್ನು ನಾನೇ ಸರಬರಾಜು ಮಾಡಿರುತ್ತೇನೆ ಎಂದರೆ ಸರಿಅಲ್ಲ. ಈ ದಿನ ನನ್ನನ್ನು ವಾದಿಯೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಅಲ್ಲ.

9. ನನ್ನ ಸಾಕ್ಷ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ಒದಗಿಸಿರುತ್ತೇನೆ. ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿದೆ. ನಾನು 20 ವರ್ಷಗಳಿಂದ ಮಲಕಪ್ಪರವರ ಜಮೀನನ್ನು ಲಾವಣಿ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದೇವೆ ಎಂದು ತೋರಿಸುವ ದಾಖಲೆಯನ್ನು ಹಾಜರುಪಡೆಸಿಲ್ಲ. ಸದರಿ ಮಲಕಪ್ಪ ಬಾಳಿಕಾಯಿ ಅಂದಾನಿಕೊಪ್ಪದವರು ಇರುತ್ತಾರೆ. ಅಂದಾನಿಕೊಪ್ಪ ಗ್ರಾಮ ಹಾಗೂ ಕದರಮಂಡಲಗಿ ಗ್ರಾಮ ಒಂದಕ್ಕೊಂದು ಹೊಂದಿಕೊಂಡಿಲ್ಲ ಎಂದರೆ ಸರಿಅಲ್ಲ. ಸಾಕ್ಷಿ ಒಂದಕ್ಕೊಂದು ಹೊಂದಿಕೊಂಡಿವೆ ಎನ್ನುತ್ತಾರೆ. ಅಂದಾನಿಕೊಪ್ಪ ಗ್ರಾಮ ಲಕಮಾಜಿಕೊಪ್ಪ ಗ್ರಾಮ ಬೇರೆ ಬೇರೆ ಎಂದರೆ ಸರಿಅಲ್ಲ. ಸಾಕ್ಷಿ ಮುಂದುವರೆದು ಒಂದೇ ಊರು ಎನ್ನುತ್ತಾರೆ. ದಾವಾ ಜಮೀನಿನ ಸರ್ವೆ ನಂಬರ 30/1 ಬಿ ಎಂದು ಇರುತ್ತದೆ.

10.ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ನಾನು ರಾಣೇಬೆನ್ನೂರಿನ ವಕೀಲರ ಬಳಿ ಯಾವ ದಿನಾಂಕದಂದು ಹೋಗಿದ್ದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ 04-05 ನೇ ತಿಂಗಳಿನಲ್ಲಿ 2017 ನೇ ಸಾಲಿನಲ್ಲಿ ಹೋಗಿದ್ದೆ ಎನ್ನುತ್ತಾರೆ. ದಾವಾ ಸ್ವತ್ತುಗಳು ಹಾಲಮ್ಮನವರ ಸ್ವಯಾರ್ಜಿತ ಆಸ್ತಿಗಳು ಎಂಬುವುದಕ್ಕೆ ನಾನು ದಾಖಲೆಯನ್ನು ನೋಡಿಲ್ಲ ಆದರೆ ಸಾಕ್ಷಿ ಮುಂದುವರೆದು ಹಾಲಮ್ಮನವರು ತಾನು ಖರೀದಿಸಿದ ಆಸ್ತಿಗಳು ಎಂದು ಹೇಳಿದ್ದರು ಎನ್ನುತ್ತಾರೆ. ದಾವಾ ಜಮೀನನ್ನು ನಾನು ನೋಡಿರುತ್ತೇನೆ. ಸದರಿ ಜಮೀನಿನ ಪಕ್ಕದ ಜಮೀನನ್ನು ನಾನು ಎತ್ತುಗಳಿಂದ ಸಾಗುವಳಿ ಮಾಡಿಕೊಡುತ್ತೇನೆ ಎನ್ನುತ್ತಾರೆ. ಸದರಿ ದಾವಾ ಜಮೀನಿನ ಪೂರ್ವದ, ಪಶ್ಚಿಮದ, ಉತ್ತರದ ಹಾಗೂ ದಕ್ಷಿಣದ ಜಮೀನುಗಳು ಯಾರ ಜಮೀನು ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುಗಳನ್ನು ನೋಡದೆ ಇದ್ದರೂ ಸಹ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುತ್ತಾರೆ.

11. ಹಾಲಮ್ಮನವರು ಯಾವ ದಿನಾಂಕದಂದು ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ಹಾಲಮ್ಮರವರು ಯಾರಿಂದ ಖರೀದಿಸಿದ್ದರು ಎಂದು ನನಗೆ ಹೇಳಿರಲಿಲ್ಲ. ನನಗೆ ಹಾಲಮ್ಮರವರು 2003-2004 ನೇ ಸಾಲಿನಿಂದ ಪರಿಚಯಸ್ತರು ಎಂದು ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಅಲ್ಲ. ಹಾಲಮ್ಮರವರು ತನ್ನ ಜೀವಿತಾ ಅವಧಿಯಲ್ಲಿ ಯಾವ ಯಾವ ದಾಖಲೆಗಳನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಾಲಮ್ಮನವರು 2011 ನೇ ಸಾಲಿನಲ್ಲಿ ವಾದಿಯ ಹೆಸರಿಗೆ ಒಂದು ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ಮೃತ್ಯು ಪತ್ರವನ್ನು ಆನಂತರ ಹಾಲಮ್ಮರವರು ರದ್ದುಪಡಿಸಿದ್ದರು ಎಂದರೆ ಸರಿಅಲ್ಲ. ಸಾಕ್ಷಿ ಮುಂದುವರೆದು ವೃದ್ಯಾಪ್ಯ ವೇತನಕ್ಕಾಗಿ ಅವರನ್ನು ಕರೆತಂದು ರದ್ದುಪಡೆಸಲಾಗಿತ್ತು ಎಂದು ಹಾಲಮ್ಮರವರು ನನಗೆ ಹೇಳಿದ್ದರು ಎನ್ನತ್ತಾರೆ. ಸದರಿ ನಿಪಿ-04 ಮತ್ತು 12 ರ ಮೇಲಿರುವ ಹೆಬ್ಬಟ್ಟಿನ ಗುರುತುಗಳು ಬೇರೆ ಬೇರೆ ವ್ಯಕ್ತಿಯ ಹೆಬ್ಬಟ್ಟಿನ ಗುರುತುಗಳು ಇರುತ್ತವೆ ಎನ್ನುತ್ತಾರೆ.

12. ಹಾಲಮ್ಮರವರಿಗೆ 02 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ನನಗೆ ಹಾಲಮ್ಮರವರು ಹೇಳಿದ್ದರು. ಸದರಿಯವರ ಹೆಸರು ಹನುಮವ್ವ ಹಾಗೂ ದ್ಯಾಮವ್ವ ಎಂದು ಇತ್ತು. ಸದರಿ ಹಾಲಮ್ಮರವರು ತೀರಿಕೊಳ್ಳುವ ಕಾಲಕ್ಕೆ ಅವರಿಗೆ 90-95 ವರ್ಷ ಇತ್ತು ಎಂದರೆ ಸರಿಅಲ್ಲ. ಸಾಕ್ಷಿ ಮುಂದುವರೆದು ಇನ್ನು ಗಟ್ಟಿಯಾಗಿದ್ದರು ಎನ್ನುತ್ತಾರೆ. 100-110 ವಯಸ್ಸಿನವರು ಸಹ ಗಟ್ಟಿಯಾಗಿರುತ್ತಾರೆ ಎಂದರೆ ಸರಿ. ಸದರಿ ಹಾಲಮ್ಮರವರು ತೀರಿಕೊಳ್ಳುವ ಪೂರ್ವದ 06 ತಿಂಗಳಿನಿಂದ ಎದ್ದು ಓಡಾಡುತ್ತಿದ್ದರು ಎಂದರೆ ಸರಿಅಲ್ಲ. ಸದರಿಯವರು ತಾವು ತೀರಿಕೊಳ್ಳುವ ಪೂರ್ವದ 06 ತಿಂಗಳಿನಿಂದ ಎದ್ದು ಓಡಾಡದಿದ್ದರೂ ಸಹ ಓಡಾಡುತ್ತಿದ್ದರು ಎಂದು ಪ್ರತಿವಾದಿಯರು 06-10 ರವರಿಗೆ ಹಾನಿಯನ್ನು ಉಂಟು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ. ಸದರಿ ಹಾಲಮ್ಮರವರಿಗೆ ಸರಿಯಾಗಿ ಕಣ್ಣು ಕಾಣುಸುತ್ತಿದ್ದಿಲ್ಲ ಎಂದರೆ ಸರಿಅಲ್ಲ. ಸದರಿ ಹಾಲಮ್ಮರವರು ಮಾಡಿದ ಮೃತ್ಯು ಪತ್ರದ ರದ್ದತಿ ಪತ್ರವನ್ನು ನಾನು ನೋಡಿಲ್ಲ ಆದರೆ ಸದರಿ ರದ್ದತಿ ಪತ್ರವನ್ನು ಮಾಡಿರುತ್ತಾರೆ ಎಂದು ಹಾಲಮ್ಮರವರು ನನಗೆ ಹೇಳಿದ್ದರು ಎನ್ನುತ್ತಾರೆ. ಸದರಿ ಹಾಲಮ್ಮರವರು ಮಾಡಿದ ಒಂದು ಮೃತ್ಯು ಪತ್ರವನ್ನು ರದ್ದು ಮಾಡಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ. 2016-17 ನೇ ಸಾಲಿನಲ್ಲಿ ಆ ಬಗ್ಗೆ ನನಗೆ ಹೇಳಿದ್ದರು. ಸದರಿ ಸಾಲಿನಲ್ಲಿ ಹಾಲಮ್ಮರವರು ಓಡಾಡುವ ಸ್ಥಿತಿಯಲ್ಲಿ ಇಲ್ಲದ ಕಾರಣದಿಂದ ಆ ಬಗ್ಗೆ ಅವರು ನನ್ನ ಬಳಿ ಹೇಳುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಅಲ್ಲ.

13. ಹಾಲಮ್ಮರವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಹಾಲಮ್ಮರವರು ದಾವಾ ಜಮೀನನ್ನು ಖರೀದಿಸುವ ಸಮಯದಲ್ಲಿ ಗಂಡನ ಜೊತೆ ವಾಸವಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಾಲಮ್ಮರವರು ಶೇತ್ಕಿ ಮಾಡುತ್ತಿದ್ದು ಬೇರೆ ನೌಕರಿ ವಗ್ಯೆರೆ ಮಾಡುತ್ತಿರಲಿಲ್ಲ. ಸದರಿ ದಾವಾ ಜಮೀನನ್ನು ಹಾಲಮ್ಮರವರು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕುರಿಗಳು ಇದ್ದದ್ದನ್ನು ಮಾರಿ ಖರೀದಿಸಿರುತ್ತೇನೆ ಎಂದು ಹೇಳಿದ್ದರು ಎನ್ನುತ್ತಾರೆ. ಸದರಿ ಜಮೀನಿನಲ್ಲಿ ಹಾಲಮ್ಮರವರ 02 ಜನ ಹೆಣ್ಣು ಮಕ್ಕಳಿಗೂ ಸಹ ಹಕ್ಕು ಇತ್ತು ಎಂದರೆ

ನನಗೆ ಗೊತ್ತಿಲ್ಲ. ನಿಪಿ-12 ಮೃತ್ಯು ಪತ್ರವನ್ನು ಎಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿದೆ. ಸದರಿ ಮೃತ್ಯು ಪತ್ರವನ್ನು ಬ್ಯಾಡಗಿಯ ತಹಶೀಲ್ದಾರರ ಕಛೇರಿಯ ಬಳಿ ಇರುವ ಬೇವಿನ ಕಟ್ಟಿ ಬಳಿ ಬರೆದಿರುತ್ತಾರೆ. ಸದರಿ ಸ್ಥಳದಲ್ಲಿ ಸಾರ್ವಜನಿಕವಾಗಿ ಟೈಪಿಂಗ ಮಾಡುವವರು ಯಾರು ಇಲ್ಲ ಎಂದರೆ ಸಾಕ್ಷಿ ಸದರಿ ಸ್ಥಳದಲ್ಲಿ ಒರ್ವ ವಕೀಲರು ಮಾಹಿತಿ ಪಡೆದು ಬರೆದುಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಬರೆದುಕೊಂಡಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಬರೆದುಕೊಂಡಿದ್ದ ಕಚ್ಚಾ ಹಾಳೆಗೆ ಸಹಿ ಮಾಡಿರಲಿಲ್ಲ ಎನ್ನುತ್ತಾರೆ. ಸದರಿ ಸ್ಥಳದಲ್ಲಿ ನಾನು ಸಹಿ ಮಾಡಿದ ಬಾಂಡ ಅನ್ನು ನಾನು ನೋಡಿರುತ್ತೇನೆ. ಸದರಿ ಬಾಂಡನ ಮೇಲೆ ಇದ್ದ ತಾರೀಕನ್ನು ನಾನು ಗಮನಿಸಿರಲಿಲ್ಲ ಆದರೆ ಅದನ್ನು ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಬಾಂಡ ಪೇಪರನ್ನು ವಾದಿ ನಮಗೆ ತಂದು ಕೊಟ್ಟಿದ್ದರು ಎಂದರೆ ಸರಿಅಲ್ಲ. ಸದರಿ ಬಾಂಡ ಪೇಪರ ಅನ್ನು ವಕೀಲರು ತೆಗೆದುಕೊಂಡು ಬಂದಿದ್ದರು ಹಾಗೂ ಸದರಿ ಸಮಯದಲ್ಲಿ ಹಾಲಮ್ಮರವರು ಸಹ ಇದ್ದರು ಎನ್ನುತ್ತಾರೆ. ಸದರಿ ಬಾಂಡ ಪೇಪರ ನಮ್ಮ ಬಳಿ ತೆಗೆದುಕೊಂಡು ಬಂದಿದ್ದಾಗ ಅದರ ಮೇಲೆ ಬರೆದಿದ್ದು ಇತ್ತು. ಸದರಿ ಬಾಂಡ ಪೇಪರ ತೆಗೆದುಕೊಂಡು ಬಂದ ವಕೀಲರ ಹೆಸರು ನನಗೆ ಗೊತ್ತಿಲ್ಲ. ಸದರಿ ಬಾಂಡನಲ್ಲಿ ಬರೆದ ಸಂಗತಿಗಳನ್ನು ನಮಗೆ ಓದಿ ಹೇಳಿದ ನಂತರ ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ಸದರಿ ಬಾಂಡ ಪೇಪರನಲ್ಲಿ ಬರೆದ ಸಂಗತಿಗಳನ್ನು ನಮಗೆ ಓದಿ ಹೇಳಿದ ನಂತರ ಸದರಿ ಬಾಂಡ ಪೇಪರನಲ್ಲಿ ಆ ರೀತಿ ಬರೆದಿದೆ ಎಂದು ನಮಗೆ ಗೊತ್ತಾಯಿತು ಎಂದರೆ ಸರಿ.

14. ಸದರಿ ಬಾಂಡ ಪೇಪರನಲ್ಲಿ ಬೆರಳಚ್ಚು ಕಪ್ಪು ಬಣ್ಣದ್ದು ಇತ್ತು. ಸದರಿ ಮೃತ್ಯು ಪತ್ರವನ್ನು ಹಾಲಮ್ಮರವರು ರದ್ದು ಪಡೆಸಿದ ನಂತರ ದಾವಾ ಸ್ವತ್ತುಗಳಲ್ಲಿ ಹಾಲಮ್ಮರವರ 02 ಜನ ಹೆಣ್ಣು ಮಕ್ಕಳಿಗೆ ಸಮಾನವಾದ ಹಿಸ್ಸೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಹಾಲಮ್ಮರವರ ಒರ್ವ ಮಗಳ ಮಗ ಅವಳನ್ನು ಜೋಪಾನ ಮಾಡಿರುತ್ತಾರೆ ಎಂದು ಹೇಳಿದ್ದರು ಎನ್ನುತ್ತಾರೆ. ವಾದಿ ನನಗೆ 2011-12 ನೇ ಸಾಲಿನಿಂದ ಪರಿಚಯ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗೂ

06-10 ನೇ ಪ್ರತಿವಾದಿಯರ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಅಲ್ಲ.

15. ಸದರಿ ಈ ಮೇಲೆ ಹೇಳಿದ ಬಾಂಡ ಪೇಪರಿಗೆ ಮಾಹಿತಿ ನೀಡಬೇಕಾದರೆ ಬೆಳಗ್ಗೆ ಸಮಯ 11-30 ಆಗಿತ್ತು. ಸದರಿ ದಿನ ನಮ್ಮ ಗ್ರಾಮದಿಂದ ನಾನು ಹಾಲಮ್ಮರವರ ಕೋರಿಕೆಯ ಮೇರೆಗೆ ಬಂದಿದ್ದೆ. ಸದರಿ ಬ್ಯಾಡಗಿಗೆ ಬರಲು ಮೊದಲಿನ ದಿನ ಹಾಲಮ್ಮರವರು ಜಮೀನಿನ ಬಳಿ ನನಗೆ ಹೇಳಿದ್ದರು. ನಿಪಿ-12 ಕ್ಕೆ ಸಹಿ ಮಾಡುವ ಮೊದಲು ಅದರಲ್ಲಿ ಬರೆದಿದ್ದನ್ನು ತಿಳಿಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಹಾಲವ್ವರವರ ಹೆಸರಿಗೆ ಸರ್ವೆ ನಂಬರ 310/3ಕ ನೇದ್ದರಲ್ಲಿ 01 ಎಕರೆ 20 ಗುಂಟೆ ಮೃತ್ಯು ಪತ್ರದ ಪ್ರಕಾರ ಬಾರದೇ ಇದ್ದರೂ ಸಹ ಆ ಬಗ್ಗೆ ಸುಳ್ಳು ಸಂಗತಿಯನ್ನು ನಿಪಿ-12 ರಲ್ಲಿ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನನ್ನು ಹಾಲವ್ವರವರ ಗಂಡ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಸಂಪೂರ್ಣವಾಗಿ ಹಾಲವ್ವರವರ ಗಂಡ ಹಾಲವ್ವರವರ ಮಗಳಾದ ಹನುಮವ್ವರವರಿಗೆ ಮೃತ್ಯು ಪತ್ರದ ಮೂಲಕ ನೀಡಿದ್ದರೂ ಸಹ 01 ಎಕರೆ 29 ಗುಂಟೆ ಮಾತ್ರ ನೀಡಲಾಗಿದೆ ಎಂದು ನಿಪಿ-12 ರಲ್ಲಿ ಸುಳ್ಳು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹಾಲವ್ವರವರು ಮೃತ್ಯು ಪತ್ರವನ್ನು ರದ್ದು ಮಾಡಿದ ನಂತರ ಯಾವುದೇ ಮೃತ್ಯು ಪತ್ರವನ್ನು ಬರೆದು ಕೊಡದೆ ಇದ್ದರೂ ಸಹ ಬರೆದು ಕೊಟ್ಟಿರುತ್ತಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆಂದರೆ ಸರಿಅಲ್ಲ.

16. ಸದರಿ ನಿಪಿ-12 ಮೃತ್ಯು ಪತ್ರಕ್ಕೆ ವಕೀಲರು ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ವಕೀಲರು ಯಾರು ಎಂದು ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆಂದರೆ ಸರಿಅಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

Sd/- 12-08-2025

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.